ಹುಟ್ಟಿದವು. ಒಂದೂ ಪುಸ್ತಕವಿಲ್ಲದ ಮನೆಯಲ್ಲಿ ನಾನು ಹುಟ್ಟಿದ್ದು. ನನ್ನ ಬಾಲ್ಯಕಾಲದಲ್ಲಿ ನಮ್ಮ ಮನೆಯಲ್ಲಿದ್ದ ಒಂದೇ ಒಂದು ಪುಸ್ತಕ ಅಂದ್ರೆ ರೇಷನ್ ಕಾರ್ಡು. ನನ್ನ ಎಲ್ಲ ಕಥೆಯೂ ಈ ಸಂಗತಿಯಲ್ಲೇ ಅಡಗಿದೆ ಅನ್ನಿಸುತ್ತೆ!

ಚಿಕ್ಕವನಿದ್ದಾಗ ನನ್ನ ತಲೆಕೂದಲು ದಟ್ಟವಾಗಿತ್ತು. ಯಾವಾಗಲೂ ತಲೆ ತುಂಬ ಹೇನುಗಳು. ನನ್ನಮ್ಮ ಹೇನುಗಳನ್ನೆಲ್ಲ ಹಿಡಿದು ಹಿಡಿದು ಕುಕ್ಕಿ ತಲೆಯನ್ನು ಸ್ವಚ್ಛ ಮಾಡುತ್ತಿದ್ದಳು. ಹೀಗೆ ಹೇನು ಹಿಡಿಯುವಾಗ ಅಮ್ಮ ಹೇಳುತ್ತಿದ್ದ ಅದ್ಭುತ ಕಥೆಗಳಿಂದ ನನ್ನ ಕಲ್ಪನಾಲೋಕ ಜೀವಪಡೆಯುತ್ತ ಹೋಯಿತು. ಆನಂತರ ಎಷ್ಟೋ ವರ್ಷಗಳ ಮೇಲೆ ನನಗೆ ಗೊತ್ತಾದದ್ದು ಏನಪ್ಪಾ ಅಂದರೆ, ಅಮ್ಮ ಹೇಳುತ್ತಿದ್ದ ಕಥೆಗಳೆಲ್ಲ 'ಅರೇಬಿಯನ್ ನೈಟ್ಸ್'ನ 'ಸಾವಿರದ ಒಂದು ಕಥೆಗಳು' ಪುಸ್ತಕದ್ದು ಎಂದು. ನನ್ನ ತಾಯಿ ಓದಿರೋದು ನಾಲ್ಕನೇ ತರಗತಿವರೆಗೆ ಮಾತ್ರ. ಅವಳು ತನ್ನ ನೀಳ ಬೆರಳುಗಳಿಂದ ಚಿತ್ರಗಳನ್ನು ಬಿಡಿಸುತ್ತಿದ್ದಳು. ಹಕ್ಕಿಗಳ ಚಿತ್ರವನ್ನೇ ಅವಳು ಯಾವಾಗಲೂ ಬರೆಯುತ್ತಿದ್ದುದು. ಓಹ್! ಅದೆಷ್ಟು ಜೀವಂತ ಪಕ್ಷಿಗಳು ಅವು! ಆ ಪಕ್ಷಿಗಳ ಕೊಕ್ಕಿನಲ್ಲಿ ಸದಾ ಒಂದು ತುಂಡು ರೊಟ್ಟಿ ಇರುತ್ತಿತ್ತು! ನನ್ನ ಕಥೆಗಳು ಕಣ್ಣುಬಿಟ್ಟಿದ್ದು ಅಮ್ಮ ಹೇಳುತ್ತಿದ್ದ ಕಥೆಗಳಿಂದ...

ನನಗನ್ನಿಸುತ್ತೆ... ಎಲ್ಲ ಕಥೆಗಳು, ಕವಿತೆಗಳು, ಈ ಲೋಕದ ಜ್ಞಾನ ಏನಿದೆ ಅದೆಲ್ಲವೂ ಪ್ರಪಂಚದಲ್ಲಿ ಇಲ್ಲಿಯತನಕ ಬದುಕಿ, ಉಳಿದುಕೊಂಡು ಬಂದಿರುವ ಲೋಕದ ಗುಟ್ಟುಗಳ ಇತಿಹಾಸ ಅಂತ. ಈ ಕಾಸ್ಮಿಕ್ ರಹಸ್ಯಗಳ ಅನನ್ಯ ಮುಂದುವರಿಕೆಯೇ ಎಲ್ಲ ಭಾಷೆಯ ಪ್ರತಿಯೊಬ್ಬ ಬರಹಗಾರನೂ ಆಗಿದ್ದಾನೆ. ನನ್ನ ಭಾಷೆಯಲ್ಲಿ ನಾನು ಈ ರಹಸ್ಯದ ಒಂದು ಕೊಂಡಿ ಅಷ್ಟೇ.

◆ **'ನಾನು ಬರೆಯಬೇಕು' ಅನ್ನುವ ಆಲೋಚನೆ ನಿಮ್ಮ ಹೃದಯದಲ್ಲಿ ಮೊಳೆತಿದ್ದು ಹೇಗೆ?**

ಬರವಣಿಗೆ ಅನ್ನೋದು ವೈಯಕ್ತಿಕವಾಗಿ ನನಗೆ ಮಾನಸಿಕ ಮತ್ತು ಸಾಂಸ್ಕೃತಿಕ ಉಳಿಯುವಿಕೆಯ

**ಎಲ್ಲಿ ಸಮಾನತೆಯ ಆಲೋಚನೆ ಇರೋದಿಲ್ವೋ ಅಲ್ಲಿ ಸಂವಹನ ಸಾಧ್ಯವಿಲ್ಲ. ಎಲ್ಲಿ ಭಾಷೆಯ ಬಳಕೆ ಸರಿ ಇರೋದಿಲ್ವೋ ಅಲ್ಲಿ ಪ್ರೀತಿ ಮತ್ತು ಪರಸ್ಪರ ಅರ್ಥಮಾಡಿಕೊಳ್ಳುವುದೂ ಸಾಧ್ಯವಿಲ್ಲ.**

